ತಕಲಿಗಾಗಿ ತಡಕಾಡಿದೆ, ಸಿಗಲಿಲ್ಲ. ಕೆಲವು ಕಾಗದ, ಎಕ್ಸರ್‌ಸೈಜ್ ಪುಸ್ತಕ ಇತ್ಯಾದಿ ಸಿಕ್ಕವು. ಅವನ್ನು ಮನೆಗೆ ತಂದೆ. ಅವುಗಳಲ್ಲಿ ಅಜ್ಜನ ಅನೇಕ ಅಪ್ರಕಟಿತ ಚಿಕ್ಕಚಿಕ್ಕ ಪದ್ಯಗಳು, ಸಂಸ್ಕೃತ ಬರವಣಿಗೆಗಳು, ಅವರು ತಮ್ಮ ಕಾಲದಲ್ಲಿ ಬರೆದು ಕೊಟ್ಟು, ಪ್ರಸಾರವಾಗಿದ್ದಿರಬಹುದಾದ ಸಂಸ್ಕೃತ ಬಾನುಲಿ ನಾಟಕ ಇತ್ಯಾದಿ ಇದ್ದುವು. ಜೊತೆಗೆ ಅಜ್ಜ 1933ರಲ್ಲಿಯೇ ನೇರವಾಗಿ ಗುಜರಾತಿಯಿಂದ ಕನ್ನಡಿಸಿದ್ದ ಗಾಂಧೀಜಿಯವರ ಆತ್ಮಕಥೆಯ ಕೆಲವು ಪುಟಗಳಿದ್ದುವು. ಹರಕು ಮುರುಕಾಗಿದ್ದ ಕೆಲವು ಕಾಗದ ಚೂರು, ಜೊತೆಯಲ್ಲೇ ಒಂದು ಪುಟ್ಟ ಎಕ್ಸರ್‌ಸೈಜ್ ಪುಸ್ತಕ ಸಿಕ್ಕವು; ಅವನ್ನೆಲ್ಲ ತಂದು ಮನೆಯಲ್ಲಿ ಇಟ್ಟು ಬಿಟ್ಟಿದ್ದೆ.

ಈಚೆಗೆ ಅಜ್ಜನ ಸರಕನ್ನು ಮತ್ತೆ ಹೊಂದಿಸಿ ನೋಡಬಯಸಿದೆ. ಅದರಲ್ಲಿ ಸಿಕ್ಕ ಆ ಎಕ್ಸರ್‌ಸೈಜ್ ಅನ್ನು ಕುತೂಹಲದಿಂದ ಪರಿಶೀಲಿಸಿದೆ; ಇದು ಸಾಲಿ ಅವರು ನಿಯಮಿತವಾಗಿ ಬರೆಯುತ್ತಿದ್ದ ದಿನಚರಿಯ ಪುಸ್ತಕ. ಅದರಲ್ಲಿ ತಾರೀಖು, ಸಮಯ ಇತ್ಯಾದಿ ತಪ್ಪದೇ ನಮೂದಿಸಿದ್ದಾರೆ. ನನಗೆ ಸಿಕ್ಕಿದೆ ಎಂದು ಮೇಲೆ ಹೇಳಿದೆನಲ್ಲ, ಅದೇ ಪುಸ್ತಕ ಇದು. ಇದರಲ್ಲಿ 21.10.1941ರಿಂದ ಬರೆಯಲಾರಂಭಿಸಿದ್ದಾರೆ. 12.02.1942ರಂದು ಬರೆದದ್ದು ಕೊನೆಯ ಪುಟದಲ್ಲಿದೆ.

ಆ ಕಾಲದ ಬಹುಶಃ ಎಲ್ಲ ಸಾಹಿತಿಗಳು ಹೀಗೆ ದಿನಚರಿ ಬರೆಯುತ್ತಿದ್ದರು ಅನಿಸುತ್ತದೆ. ಸಾಲಿಯವರು ಸಹ ಬರೆದಿದ್ದಾರೆ. ಈ ಪುಸ್ತಕ ನೋಡಿದರೆ ಬಹಳಷ್ಟು ವಿಚಾರಗಳು, ಕುತೂಹಲಗಳು ಮೂಡುತ್ತವೆ. ಪ್ರಸ್ತುತ ಡೈರಿಯನ್ನು ಓದಿ ನನ್ನ ಮನದಲ್ಲಿ ಮೂಡಿದ ಕೆಲವು ಅನಿಸಿಕೆಗಳಿಗೆ ಹೊರದಾರಿ ನೀಡುತ್ತಿದ್ದೇನೆ:

ಸಾಲಿ ಅವರು 'ಶ್ರೀರಾಮಚರಿತವು'ದಂಥ ಕೃತಿಗಳನ್ನು, ಅನೇಕ ಕವನಗಳನ್ನು ಬರೆದ ಪೆನ್ನಿನಿಂದಲೇ ಪ್ರಸ್ತುತ ಡೈರಿಯನ್ನು ಬರೆಯುತ್ತಿದ್ದುದನ್ನು ಹೆಮ್ಮೆಯಿಂದ ಹೇಳಿದ್ದಾರೆ. (ಈ ಡೈರಿಯ ಅವಧಿಯಲ್ಲಿ) ಅವರು ತಮ್ಮ ಮನೆ 'ಶ್ರೀನಿಕೇತನ'ವನ್ನು ಕಟ್ಟಿಸಿಕೊಳ್ಳಲು ಹಾಗೂ ಹಿತ್ತಲದಲ್ಲಿ ಒಂದು ಬಾವಿ ತೋಡಿಸಿಕೊಳ್ಳಲು ಯತ್ನಿಸುತ್ತಿದ್ದರು. (1942ನೇ ಇಸ್ವಿಯ ಯುಗಾದಿ ಚೈತ್ರ ಶುದ್ಧ ಪ್ರತಿಪದೆಯ ದಿವಸ ಅವರು 'ಶ್ರೀನಿಕೇತನ'ದ ವಾಸ್ತುಪೂಜೆ ಮಾಡಿ, ಅಲ್ಲಿ ವಾಸಿಸಲು ಆರಂಭಿಸಿದ್ದಾರೆ.) ಸಣ್ಣಮಗಳು ಭಾಗಮ್ಮ (ಭಾಗೀರಥಿ), ದೊಡ್ಡಮಗಳು ಸುಬ್ಬಕ್ಕ (ಸತ್ಯಭಾಮಾ), ಸುಬ್ಬಕ್ಕನ ಮಗ ಶ್ರೀನಿವಾಸರೊಂದಿಗೆ, ಬಹುಶಃ ಅಲ್ಲಿಯೇ ಪಕ್ಕದಲ್ಲಿದ್ದ ಒಬ್ಬರ ಮನೆಯಲ್ಲಿ, ಬಾಡಿಗೆಗೆ ಇದ್ದರು. ಅಳಿಯ ಪಿ.ಬಿ. ದೇಸಾಯರು ಬಹುಶಃ ಮದ್ರಾಸದಲ್ಲಿ ನೌಕರಿ ಮಾಡುತ್ತಿದ್ದರು. ಅವರು ಆಗಾಗ ಧಾರವಾಡಕ್ಕೆ ಬಂದು ಹೋಗುತ್ತಿದ್ದರು. ಈ ಹೊತ್ತಿಗಾಗಲೇ ಸಾಲಿಯವರ 'ಚಿಗುರೆಲೆ' (1925), 'ಕುಸುಮಾಂಜಲಿ' (1930), 'ತಿಲಾಂಜಲಿ' (1932), 'ಶ್ರೀಕೇಶವಕುಸುಮಾಂಜಲಿ' (1932), 'ಶ್ರೀರಾಮಚರಿತವು: ಬಾಲಕಾಂಡವು' (1934), 'ಶ್ರೀರಾಮಚರಿತವು: ಅಯೋಧ್ಯಾಕಾಂಡವು' (1935), 'ಅಭಿಸಾರ' (1935) ಮತ್ತು ಪಾಂಡುರಂಗರಾವ ದೇಸಾಯರು ಸಂಕಲಿಸಿದ್ದ 'ಚಿತ್ರಸೃಷ್ಟಿ' (1940) ಕೃತಿಗಳು ಪ್ರಕಟವಾಗಿದ್ದುವು. ಹೈದರಾಬಾದದಲ್ಲಿ 1941 ಡಿಸೆಂಬರ್‌ದಲ್ಲಿ ಎ.ಆರ್. ಕೃಷ್ಣಶಾಸ್ತ್ರೀ ಅವರ ಅಧ್ಯಕ್ಷತೆಯಲ್ಲಿ ನಡೆದ, 26ನೆಯ ಸಾಹಿತ್ಯ ಸಮ್ಮೇಳನದಲ್ಲಿ ಸಾಲಿ ಅವರು ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರ ಬಗ್ಗೆ ಮೇಲಿನ ಡೈರಿಯಲ್ಲಿ ಉಲ್ಲೇಖಗಳಿವೆ. 1941-42ರ ಅವಧಿಯಲ್ಲಿ ಅವರು ಸಂಪಾದಿಸುತ್ತಿದ್ದ ಶಾಲಾ ಪಠ್ಯಪುಸ್ತಕ 'ಸೊಗಸಿನ ಓದು' ಕೃತಿಯ ಉಲ್ಲೇಖಗಳು ಸಹ ಇದರಲ್ಲಿವೆ. ಆಗ ಸಾಲಿಯವರು ಕರ್ನಾಟಕ ಹೈಸ್ಕೂಲಿನಲ್ಲಿ (1928-46) ಶಿಕ್ಷಕರಾಗಿದ್ದರು.

ಒಂದು ಸಲ ಸಾಲಿ ಅವರ ಕ್ಲಾಸಿನಲ್ಲಿ ಕೆಲವು ವಿದ್ಯಾರ್ಥಿಗಳು ಗುರುಗಳು ಕೊಟ್ಟ 'ಮನೆಗೆಲಸ' ಮಾಡಿಕೊಂಡು ಹೋಗಿರಲಿಲ್ಲ. ಆ ದಿನ ಸಾಲಿ ಪ್ರೀತಿಯಿಂದ ಉಪದೇಶಿಸಿ, ಮತ್ತೊಮ್ಮೆ ಹಾಗೆ ಮಾಡದಿರಲು ತಿಳಿಸಿ, ಪಾಠ ಮುಂದುವರಿಸಿದರು. ಆ ನಂತರ ಮರುದಿನದ ಕ್ಲಾಸಿನಲ್ಲಿ ವಿದ್ಯಾರ್ಥಿಗಳು ಮತ್ತೆ ನಿರ್ಲಕ್ಷ್ಯದ ಅಂಥದೇ ತಪ್ಪು ಮಾಡಿದರಂತೆ. ಆಗ ಸಾಲಿ ಅವರು ವಿದ್ಯಾರ್ಥಿಗಳನ್ನು ದೂಷಿಸದೇ, ಸಾಮೂಹಿಕವಾಗಿ, 'ತಪ್ಪು ನನ್ನದು, ಒಳ್ಳೆಯ ಶಿಕ್ಷಕನಾಗುವಲ್ಲಿ ನಾನು ಎಲ್ಲೋ ತಪ್ಪಿದ್ದೇನೆ, ಎಂಥದೋ ದೋಷ, ಕೊರತೆ ನನ್ನಲ್ಲಿಯೇ ಇದ್ದುದರಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ